# ಡಿವಿಜಿ

ಕಾವ್ಯಾಲಯದ ಕೂಡಲಿ ಚಿದಂಬರಂ ಕಾಯಿಲೆ ಬಿದ್ದರು. ಮೈಸೂರಿನಲ್ಲಿ. ಆಗಿನ ಕಾಲದಲ್ಲಿ, ಕಾವ್ಯಾಲಯ ಒಂದು ಅಚ್ಚುಕಟ್ಟಾದ ಪ್ರಕಾಶನ ಸಂಸ್ಥೆ.

ಚಿದಂಬರಂ ಮಕ್ಕಳು ಆಗ ಎಲ್ಲರೂ ಚಿಕ್ಕವರು. ಹಗಾಗಿ ಅವರ ಪ್ರಕಟಣೆಯ ಕೆಲವು ಪುಸ್ತಕಗಳ ಪ್ರೂಫ್ ತಿದ್ದುವುದು ಇತ್ಯಾದಿ ಜವಾಬ್ದಾರಿಗಳನ್ನು ಅವರು ನನಗೆ ವಹಿಸಿದ್ದರು.


ಒಂದು ಖಾಸಗಿ ಪ್ರೆಸ್ಸಿನ ಮೇಲ್ವಿಚಾರಕನಾಗಿದ್ದು, ಅದರ ಮಾಲೀಕರಿಗೂ ನನಗೂ ಭಿನ್ನಾಭಿಪ್ರಾಯವಾಗಿ, ಅವರನ್ನು ಬಿಟ್ಟು ನಾನು ಈಗ ಸ್ವತಂತ್ರನಾಗಿದ್ದೆ. ಜೀವನೋಪಾಯಕ್ಕಾಗಿ ಪುಸ್ತಕ ವ್ಯಾಪಾರವನ್ನು ಮಾಡಿಕೊಂಡಿದ್ದೆ.

ಹೀಗಿದ್ದುದರಿಂದ ಇಂಥ ಕೆಲಸಗಳನ್ನು ಮಾಡಿಸುತ್ತ ಚಿದಂಬರಂ ನನಗೆ ಆರ್ಥಿಕವಾಗಿಯೂ ಸಹಾಯ ಮಾಡುತ್ತ ಇದ್ದರು. ಅವರು ನನಗೆ ಬಹಳ ಆತ್ಮೀಯರಾದವರೂ, ಹೌದು; ನನ್ನ ಕಷ್ಟ ಸುಖಗಳಲ್ಲಿ ನೆರವಾಗಿಯೂ ಇದ್ದರು. ನನ್ನ ಮೊದಲ ಕಾದಂಬರಿ 'ಮೂಲಾನಕ್ಷತ್ರ' ಹೊರ ಬಂದದ್ದೇ ಕಾವ್ಯಾಲಯದಿಂದ.

ಡಿವಿಜಿಯವರ ಕೃತಿಗಳು ಎಲ್ಲವೂ ಕಾವ್ಯಾಲಯದಿಂದಲೇ ಪ್ರಕಟವಾಗುತ್ತಿದ್ದವು. ಪುಸ್ತಕಗಳ ಅಚ್ಚುಕಟ್ಟಿಗೆ ಆಗಿನ ಕಾಲದಲ್ಲಿ ಕಾವ್ಯಾಲಯದ ಪ್ರಕಟಣೆಗಳು ಪ್ರಸಿದ್ಧಿ.

ಕಾವ್ಯಾಲಯ ಒಂದೇ ಅಲ್ಲ, ಮೈಸೂರಿನ ಎಲ್ಲ ಪ್ರಕಾಶಕರ ಪುಸ್ತಕಗಳೂ ಹೆಚ್ಚು ಕಡಮೆ ಹಾಗೆಯೇ; ಕಣ್ಣಿಗೊತ್ತಿಕೊಳ್ಳುವ ಹಾಗೆ.

ಹೀಗಾಗಿ 'ಮಂಕುತಿಮ್ಮನ ಕಗ್ಗ' (ಎಷ್ಟನೆಯ ಮುದ್ರಣವೋ ಮರೆತು ಹೋಗಿದೆ). ಮುದ್ರಣದ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಈಗ ನನಗೆ ಬಿತ್ತು.



> ಮಾತಿನಲ್ಲಿ ಧಾರಾಳ, ಅಪ್ಪಟ ನಗು, ಎಲ್ಲರೊಂದಿಗೂ ಸಲೀಸಾಗಿ ಬೆರೆಯಬಲ್ಲ; ಹರಟಬಲ್ಲ ಸರಳ ವ್ಯಕ್ತಿತ್ವ ಅವರದ್ದು.

ಸಾಮಾನ್ಯವಾಗಿ ಚಿದಂಬರಂ ಡಿವಿಜಿಯವರ ಕೃತಿಗಳು ಎಲ್ಲವನ್ನೂ ಆಗ ವೆಸ್ಲಿ ಪ್ರೆಸ್ಸಿನಲ್ಲಿಯೇ ಮಾಡಿಸುತ್ತ ಇದ್ದರು. ವೆಸ್ಲಿ ಪ್ರೆಸ್ ಆ ಕಾಲದಲ್ಲಿ ಮೈಸೂರಿನಲ್ಲಿ, ಪ್ರಸಿದ್ಧವಾದ ಮುದ್ರಣ ಸಂಸ್ಥೆ. ಅದು ತಪ್ಪಿದರೆ ರಾಮರಾಯರ ಪ್ರೆಸ್.

ಹಿಂದೆ 'ಮಂಕುತಿಮ್ಮನ ಕಗ್ಗ'ವನ್ನು ಎಲ್ಲರಂತೆ ನಾನೂ ಶ್ರದ್ಧೆಯಿಂದ ಓದುತ್ತಿದ್ದೆ. ಈಗ ಅದರ ಮರು ಮುದ್ರಣದ ಪ್ರೂಫ್ ತಿದ್ದುವ ಜವಾಬ್ದಾರಿಯ ಕೆಲಸ, ಪುಟ ಪುಟಗಳ ಮೇಲೂ ಕಣ್ಣು ಹಾಯಿಸುವಿಕೆ. ಒಂದು ವಿಧದಲ್ಲಿ ಬಾಯಿಪಾಠವೇ, ಮುದ್ರಕ ಬರೀ ಮುದ್ರಕನಾದರೆ ಸುಮ್ಮನೆ ಉದ್ದಕ್ಕೆ ಪ್ರೂಫ್ ನೋಡಿಕೊಂಡು